ಕಾಲ್ನಡೆ—ಮೂಡಗೆರೆ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ದೊಡ್ಡರೋಗ, ಹಾಸನ ತಾಲ್ಲೂಕಿನಲ್ಲಿ ಚಪ್ಪೆ ರೋಗ ವ್ಯಾಪಿಸಿದ್ದವು. ಈ ತಿಂಗಳೊಳಗೆ 380 ಕಾಲ್ನಡೆಗಳೂ ಆ ಹಿಂದಿನ ತಿಂಗಳಲ್ಲಿ 523 ಕಾಲ್ನಡೆಗಳೂ ಹೋದವು.

ಜಮ್ರ್ಮಾಗಳು—ಸಾಗುವಳೀ ಬಗ್ಯಾಗಿ 207—8—0 ರೂಪಾಯಿಗಳು ಕಂದಾಯ ಬಾಳುವ ಜಮ್ರ್ಮಾಗಳು ಹೊಸದಾಗಿ ತೆಗದು ಕೊಳ್ಳಲ್ಪಟ್ಟವು.

ದಾರಣೆಗಳು— ವಂದೇ ರೀತಿಯಾಗಿವೆ.

ಮಹಮ್ಮದಲ್ಲಿ,
ಫಾರ್ ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 26ನೇ ಫಿಬ್ರವರೀ 1884.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಜಂಗ್ಲಿಗಳು ಅಂದರೆ (ದೇವರಾಯದುರ್ಗ ಮತ್ತು ಮದ್ದಗಿರಿ ಜಂಗ್ಲಿಗಳು ವಿನಾ) ಉಳಿದ ಇದರಡಿಕಂಡ ತಾಲ್ಲೂಕುಗಳು ದೇಖೀಲ್ ವಟ್ಟು ಡಿಸ್ಟ್ರಿಕ್ಟಿಗೆ ಸೇರಿದ ಜಂಗ್ಲಿಗಳ ಬಾಬತು ಸನ್ 1884—85, 1885—86, 1886—87 ಈ ಮೂರು ಸರಕಾರ್ ಸಾಲ್‌ಗಳಲ್ಲಿಯ ಅರಗಿನ ಇಜಾರೇಯು ತುಮಕೂರು ಮೊಕ್ತಾಂ ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ 1884ನೇ ಇಸವಿ ಮಾರ್ಚೀ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ.

ತುಮಕೂರು.	..	ತಿಪಟೂರು.
ಮದ್ದಗಿರಿ.	..	ಪಾವಗಡ.
ಚಿಕ್ಕನಾಯಕನಹಳ್ಳಿ.	..	ಚಿತ್ರದುರ್ಗ.
ಶೀರಾ.	..	ಸೊಳಲಕೆರೆ.
ಗುಬ್ಬಿ.	..	ಹಿರಿಯೂರು.

2. ಚಡ್ಡಿದರಖಾಸ್ತುದಾರನು, ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕೀ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯಾಗಲಿ ಕರ್ಬಿಸಿ ನೋಟುಗಳ ಮೂಲಕವಾಗಲಿ ಡಿಪಾಜಿಟ್ ಇಡತಕ್ಕದ್ದು. ಹಾಗೆ ಇಡುವದಕ್ಕೆ ತಪ್ಪಿದರೆ ಇಜಾರೆಯು ಕೂಡ್ಲೆ ಅವನಿಗೆ ಲುಕ್ಸಾನ್‌ಕರವಾಗಿ ಹರಾಜುಮಾಡಲ್ಪಟ್ಟು ಹಾಂಗೆ ಹರಾಜು ಮಾಡುವದರಿಂದ ಉಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನ ಗುರಿಮಾಡಲ್ಪಡುವದು.

3. ಅಂಗಿಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1884ನೇ ಇಸವಿ ಏಪ್ರೆಲ್ ಗುರ್ತಿತಾರೀಖಿನಲ್ಲಿ ಪ್ರವೇಶಿಸತಕ್ಕದ್ದು, ಮತ್ತು ಅವನು ಮೊದಲನೇ ತಿಂಗಳ ಖಿಸ್ತನ್ನು 1884ನೇ ಇಸವಿ ಮೇ 15ನೇ ಮತ್ತು ಅನಲ್ಲಾಗಲಿ ಯಾ ತಪ್ಪೋದ್ದಲ್ಲಾಗಲಿ ಪಾವತೀಮಾಡದೇಕಲ್ಲದೆ ತರುವಾಯದ ಯಲ್ಲ ಮೊಹೆವಾರಿ ಖಿಸ್ತುಗಳನ್ನೂ ಪ್ರತಿ ಮೂರನೇ ತಿಂಗಳ 15ನೇ ತಾರೀಖಿನೊಳಗಾಗಿ ಪಾವತಿ ಮಾಡತಕ್ಕದ್ದು; ಈ ಬಾಬತು ಮೊಹೆವಾರಿ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲೆಕ್ಕಕ್ಕೆ ಸೇರಿಸಿಕೊಳ್ಳಲ್ಪಡಲಾರದು, ಪರಂತು ಸದರೀ ಡಿಪಾಜಿಟ್ ಮೊಬಲಗು ಇಜಾರೆಯಕಡೇ ನಾಲ್ಕು ಖಿಸ್ತುಗಳಿಗಾಗಿ ಜವಾ ತೆಗದುಕೊಳ್ಳಲ್ಪಡುವದು.

4. ಇಜಾರೆದಾರನಿಂದ ಪಾವತೀಮಾಡಲ್ಪಡುವ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ ವಂದಕ್ಕೆ ವಂದಾಣೆಯಂತೆ ಲೋಕಲ್ ಸೆಸ್ ಚಾರ್ಜ್ ಮಾಡಲ್ಪಡುವದು.

5. ಮೇಲ್ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳವರಿಗೆ ಪಾವತೀ ಮಾಡಲ್ಪಡುವದಕ್ಕೆ ತಪ್ಪಿದರೆ ಯಾ ಸಾವ ಕಾಶವಾದರೆ ಇಜಾರೆಯು ಪೂರ್ತಿಯಾಗಿ ರದ್ದುಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು, ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನಿಗೆ ಲುಕ್ಸಾನ್‌ಕರವಾಗಿ ಇಜಾರೆಯು ಪುನಶ್ಚ ಹರಾಜು ಮಾಡಲ್ಪಡುವದಲ್ಲದೆ, ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6; ಇಜಾರೆದಾರನು ತನ್ನ ಇಜಾರೆಯ ಬಲದಿಂದ ಜಂಗ್ಲಿಗಳಲ್ಲಿ ತಾನು ಅರಗು ಜಮೊಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ, ಸಾಗಿಸುವದಕ್ಕಾಗಲಿ ಅಥವಾ ಊನು ಪಡಿಸುವದಕ್ಕಾಗಲಿ ಅಧಿಕಾರ ಉಂಟಾಗಿರುವದಿಲ್ಲ.

7. ಕೆಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನಾಂದಾರ್ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.

8. ಡೆಪ್ಯುಟಿ ಕಮ್ಮಿಷನರವರು ಯಾವ ಸವಾಲನ್ನಾಗಲಿ ಯಾವ ಸಬಬೂ ತಿಳಿಸದೆ ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡು ಇರುತ್ತಾರೆ.

ಮಹಮ್ಮದ ಅಲಿ, ಜೆ. ಬಿ.,
ಆಫಿಷಿಯೇಟಿಂಗ್ ಜಿ॥ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ ನಾಮಾ.

ತಾರೀಖು 3ನೇ ಮಾರ್ಚೀ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಖೆಡ್ಡಾಯಾನೆ ಆನೆಗಳನ್ನ ಹಿಡಿಯತಕ್ಕ ಕೆಲಸ ನಡಿಸಲ್ಪಡುವದರಿಂದ ಸಾಲ್ ಮಜಕೂರ್ ಮೇ 1ನೇ ಮುಕ್ತಂ ಲಾಗಾಯತು ಆಗಸ್ಟು 31ನೇ ಮುಕ್ತಂವರಿಗೆ, ಚಾಮರಾಜನಗರಕ್ಕೂ, ಹುಣಸೂರಿಗೂ, ಮಧ್ಯದಲ್ಲಿರುವ ಸರ್ಕಾರದ ರಸ್ತೆಗೆ ಪೂರ್ವ ದಿಕ್ಕಿನಲ್ಲಿರುವ ಯಾವ ಡಿಸ್ಟ್ರಿಕ್ಟು ಜಂಗ್ಲಿಯಲ್ಲಾಗಲಿ ಷಿಕಾರಿ ಆಡುವ ಬಗ್ಗೆ ಅಪ್ಪಣೆ ಕೊಡಲ್ಪಡುವದಿಲ್ಲವು.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು; ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗಡಿನ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಲೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಸ್ ನೇಟಿವ್ ಮಿದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗಡದ ಡಬ್ಬೀಗೆ ಎಂಟಾಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಕ್ರಿಸ್ಟಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧವ್ಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಜ್ಡ್ ಅಲ್ಲದ ಫ್ಯೂಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು, ಕಲ್ಕತ್ತೆ ಬೆ॥ ಸೀಬ್‌ಪೋರ್ ಸಮೀಪದಲ್ಲಿ ರಾಯಲ್ ಬೊಟಾನಿಕ್ ಗಾರ್ಡನ್-ಸೂಪರಿಂಟೆಂಡೆಂಟರಿಂದ ಗವರ್ಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತೀ.